# ಮಕ್ಕಳಲ್ಲಿ ಉತ್ಸಾಹದ ಜೀವಕಳೆ ತುಂಬಿ ಅವರ ಮನಸ್ಸುಗಳೊಂದಿಗೆ ತೊಡಗುವುದು

ಆಶಾ ಸಿಂಗ್

ಒಬ್ಬ ಶಿಕ್ಷಕ ಶಿಕ್ಷಕಿಯಾಗಿ ನಾನು ನನ್ನ ತರಗತಿಯನ್ನು ತರಗತಿ ಕೊಠಡಿಯ ಅನುಭವದೊಂದಿಗೆ ಆರಂಭಿಸುತ್ತೇನೆ. ಶಿಕ್ಷಕರಾಗುವ ಹಾದಿಯಲ್ಲಿ ಕಲಿಕೆಯಲ್ಲಿ ತೊಡಗಿರುವ ನನ್ನ ಪದವಿ ವಿದ್ಯಾರ್ಥಿಗಳಿಗೆ ಮೊದಮೊದಲು ಈ ಕೆಲವು ಏಕಾಗ್ರತೆಯನ್ನು ಬೇಡುವ ಚಟುವಟಿಕೆಗಳಲ್ಲಿ ಭಾಗವಹಿಸುವುದು ಹಾಸ್ಯಾಸ್ಪದವೆನಿಸಿದರೂ ನಾನು ಇದನ್ನೇ ಅವರಿಗೆ ಹೇಳುವುದು:

ಶಿಕ್ಷಕರು ತರಗತಿಯನ್ನು ಪ್ರವೇಶಿಸುವಾಗ ವಿದ್ಯಾರ್ಥಿಗಳು ಸಾಮಾನ್ಯವಾಗಿ ತಮ್ಮ ಸಡಗರದ ಹರಟೆಯಲ್ಲಿ ತೊಡಗಿರುತ್ತಾರೆ. ಶಿಕ್ಷಕರನ್ನು ಕಂಡ ಕೂಡಲೇ ಸಾವರಿಸಿ-ಕೊಂಡು 'ಗುಡ್ ಮಾರ್ನಿಂಗ್' ಹೇಳಲು ತರಾತುರಿಯಲ್ಲಿ ಸಿದ್ಧರಾಗುತ್ತಾರೆ. ವಿನೋದದ ಹಾವಭಾವ ಮತ್ತು ಸೂಚನೆಗಳ ಮೂಲಕ ಶಿಕ್ಷಕರು ಈ ಸನ್ನಿವೇಶವನ್ನು ಬದಲಾಯಿಸಬಹುದು. ಮಕ್ಕಳು ಕೈಗಳನ್ನು ಮೇಲೆತ್ತಿ ಬೆರಳುಗಳನ್ನು ಆಡಿಸುತ್ತಾ, (ಧ್ವನಿಯ ಸೂಕ್ತ ಏರಿಳಿತಗಳಿಂದ) 'ತಾರೆಗಳೇ ತಾರೆಗಳೇ, ನಗುನಗುವ ತಾರೆಗಳೇ, ಅಳುಅಳುವ ತಾರೆಗಳೇ, ಕೋಪವೇಕೆ ತಾರೆಗಳೇ, ನಲಿನಲಿಯಿರಿ ತಾರೆಗಳೇ' ಎನ್ನುತ್ತಾ ನಂತರ ಆ ಇಡೀ ಗುಂಪಿನ ಗಮನವನ್ನು ತಮ್ಮತ್ತ ಸೆಳೆಯಲು ಒಮ್ಮೆಲೇ ಮೆಲುದನಿಯಲ್ಲಿ 'ಶಾಂತರಾಗಿ ತಾರೆಗಳೇ, ಮೆಲ್ಲನಿರಿ' ಎನ್ನುವುದು.

ನಾನು ನನ್ನ ಪ್ರಶಿಕ್ಷಣಾರ್ಥಿಗಳಿಗೆ ನೀಡಿದ ಸಲಹೆಯೆಂದರೆ: ಹೊಸ ವಿಚಾರಗಳನ್ನು ತಮ್ಮದಾಗಿಸಿಕೊಳ್ಳಲು ಸಿದ್ಧರಾದ ಈ ಹುಮ್ಮಸ್ಸಿನ ಗುಂಪಿನೊಂದಿಗೆ ನಿಮ್ಮ ಪಾಠವನ್ನು ಆರಂಭಿಸಿ. ಹೊಸ ವಿಚಾರಗಳನ್ನು ಹುರಿದುಂಬಿಸಲು ಸಿದ್ಧರಾಗಿ. ವಿದ್ಯಾರ್ಥಿಗಳು ಒಲ್ಲದ ಮನಸ್ಸಿನಿಂದಲೇ ನಿರತರಾದರು. ಇದು ಅವರಿಗೆ ತರಗತಿಯಲ್ಲಿ ಘನತೆ ತಾರದ ವರ್ತನೆಯೆನಿಸಿರ-ಬಹುದು. ಆದರೂ, ಮಕ್ಕಳ ಜೊತೆಗೆ ವಿವಿಧ ರೀತಿಗಳಲ್ಲಿ ತೊಡಗುವುದನ್ನು ಅನುಭವಿಸಬೇಕೇ ಹೊರತು ಕೇವಲ ಕಲ್ಪಿಸಿಕೊಳ್ಳುವುದಲ್ಲ ಎಂಬ ನನ್ನ ನಂಬಿಕೆಯನ್ನು ನಾನು ಪಾಲಿಸಿದೆ.

ಶೀಘ್ರದಲ್ಲೇ ವಿದ್ಯಾರ್ಥಿ ಶಿಕ್ಷಕರು ತಮ್ಮ ಇಂಟರ್ನ್‌ಶಿಪ್‌ಗಾಗಿ ತೆರಳಿದರು: ವಿದ್ಯಾರ್ಥಿಗಳು ಬೇಗನೆ ಪಾಠ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ತರಗತಿಗಳಲ್ಲಿ ತಾವು ಕಲಿತ ಸೈದ್ಧಾಂತಿಕ ಬೋಧನಾ ಅಭ್ಯಾಸಗಳನ್ನು ತರಗತಿಗಳಲ್ಲಿ ಅವರು ಬಳಸ-ಬೇಕಾಗುತ್ತದೆ. ಶಾಲೆಗಳಲ್ಲಿ ಮೂರು ವಾರ ಪ್ರಾಯೋಗಿಕ ತರಗತಿಗಳು ಮುಗಿದ ನಂತರ ನಾನು ಅವರನ್ನು ಭೇಟಿಯಾದೆ. ನನ್ನ 'ತಾರೆಗಳೇ, ತಾರೆಗಳೇ' ಎಂಬ ಗೀತೆಯ ಉಪ-ಯುಕ್ತತೆಯ ಬಗ್ಗೆ ಅವರು ಚಕಾರ ಎತ್ತಲಿಲ್ಲ. ವಿವಿಧ ರೀತಿಯ ಭಾವನಾತ್ಮಕ ಪ್ರಾಸಬದ್ಧ ಚುಟುಕಗಳು ಮಕ್ಕಳ ಹುಮ್ಮಸ್ಸನ್ನು ಒಂದೆಡೆಗೆ ಒಗ್ಗೂಡಿಸಿ ಗಮನ ನೀಡುವುದರ ಮಹತ್ವವನ್ನು ನೆಲೆಯೂರಿಸುತ್ತದೆ. ತನ್ಮೂಲಕ ಅವರನ್ನು ಅವರ ಗುಂಪು-ಗಳೊಂದಿಗೆ ಹತ್ತಿರವಾಗುವಂತೆ ಮಾಡುತ್ತದೆ.

ಈ ಮೇಲೆ ಉಲ್ಲೇಖಿಸಿದ ವಿದ್ಯಾರ್ಥಿ-ಶಿಕ್ಷಕರ ನಡುವಿನ ಹಂಚಿಕೊಂಡ ಅನುಭವವು 'ನಾವೆಲ್ಲರೂ ಸುಮ್ಮನಿರೋಣವೆ' ಎಂಬ ಕಟು ಆದೇಶಯುಕ್ತ ಧೋರಣೆಯ ಏರು ದನಿಯಿಂದ ಶಿಕ್ಷಕರು ತರಗತಿಗೆ ಪ್ರವೇಶ ಮಾಡುವುದರ ಬದಲು ಒಂದು ಪರ್ಯಾಯವಾಗಿದೆ. ಶಿಕ್ಷಕ-ನಿಯಂತ್ರಿತ ವಿಧಾನಕ್ಕಿಂತ ಈ ಲಘುವಿನೋದ ಭರಿತ ಪರ್ಯಾಯವು ತರಗತಿಯನ್ನು ನಿಯಂತ್ರಿಸಲು ನೆರವಾಗುತ್ತದೆ. ಸಿಲ್ವಿಯ ಆಶ್ಟನ್ ವೆರ್ನರ್ ತಮ್ಮ 'ದಿ ಟೀಚರ್' ಎಂಬ ಬಹುಮುಖ್ಯ ಪುಸ್ತಕದಲ್ಲಿ ತಮ್ಮ ವಿದ್ಯಾರ್ಥಿಗಳ ಗಮನ ಸೆಳೆಯಲು ತಾವು ಶಿಕ್ಷಕರು ಪಿಯಾನೊವನ್ನು ಬಳಸಿರುವುದರ ಬಗ್ಗೆ ಉಲ್ಲೇಖಿಸುತ್ತಾರೆ. ತರಗತಿ ಸಾಧನಗಳು ಸ್ಥಳೀಯ ಸಂದರ್ಭಗಳು ಮತ್ತು ಸಂಪನ್ಮೂಲಗಳಿಗೆ ಸಂಬಂಧಿಸಿದಂತಿರಬೇಕು. ಅಸ್ತವ್ಯಸ್ಥತೆಯು ಮೂಲಕ ಕ್ರಮ-ಬದ್ಧತೆಯನ್ನುಂಟು ಮಾಡುವ ತರಗತಿ ಪ್ರಕ್ರಿಯೆಗಳು ಆಟವಾಡುವ ಮಕ್ಕಳ ಪ್ರವೃತ್ತಿಗೆ ಹತ್ತಿರವಾಗಿರುತ್ತವೆ. ಮಕ್ಕಳಿಗೆ ಸ್ವಲ್ಪ ನಗು, ಸ್ವಲ್ಪ ತರಲೆ, ಕಿಲಕಿಲ ನಗು ಇವೆಲ್ಲವುಗಳಿಗೆ ಸಮಯ ಸಿಕ್ಕರೆ ಭಾವನಾತ್ಮಕವಾಗಿ ಸಂತೃಪ್ತರಾಗುತ್ತಾರೆ. ಇಲ್ಲಿ ಅವರು ಕೇವಲ ಜ್ಞಾನಾರ್ಜನೆ ಮಾಡಿಕೊಳ್ಳುವ ವಿದ್ಯಾರ್ಥಿಗಳಾಗಿರದೆ 'ಮಕ್ಕಳು' ಎಂಬುದನ್ನು ಅಂಗೀಕರಿಸಿದಂತಾಗುತ್ತದೆ.

### ಅಗೋಚರ ಮಂತ್ರೌಷಧಿ

ಮಕ್ಕಳ ಮನಸ್ಸುಗಳಲ್ಲಿ ಅದರಲ್ಲೂ ವಿಶೇಷವಾಗಿ ಆರಂಭಿಕ ಪ್ರಾಥಮಿಕ ತರಗತಿಗಳಲ್ಲಿನ ಮಕ್ಕಳಲ್ಲಿ ಬಹಳ ಕುತೂಹಲವಿರುತ್ತದೆ. ಅವರಲ್ಲಿ ಪ್ರಯೋಗದ ಕಿಡಿಯನ್ನು ಅಥವಾ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿ ಉಳಿಸಿಕೊಂಡು ಹೋಗುವುದು ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ಶಿಕ್ಷಕರು ತರಗತಿಯಲ್ಲಿ ಬಳಸುವ ಭಾಗವಹಿಸುವಿಕೆಯ ವಿಧಾನಗಳು ಮತ್ತು ಸಮೃದ್ಧ ಶೈಲಿಯಲ್ಲಿ ವಿಷಯವನ್ನು ಪ್ರಸ್ತುತಪಡಿಸುವುದರಿಂದ, ಇವೆಲ್ಲಾ ಮಕ್ಕಳ ತಿಳುವಳಿಕೆ ಹಾಗು ಗ್ರಹಿಕೆಯ ಮೇಲೆ ಮಾಂತ್ರಿಕ ಪ್ರಭಾವವನ್ನು ಬೀರುತ್ತದೆ. ಯಾವುದೇ ರೀತಿಯ ಭಯವಿಲ್ಲದೆ ವಿಷಯದಲ್ಲಿ ಮಕ್ಕಳು ತೊಡಗುವುದು ಮತ್ತು ವಿಷಯವನ್ನು ಇಷ್ಟಪಡುವುದು ಕಲಿಕೆಯ ನಿರ್ಣಾಯಕ ಅಂಶಗಳು. ಮಕ್ಕಳು ತಪ್ಪುಗಳನ್ನು ಮಾಡಲು ಹೆದರದೆ ಇರುವ ಅಥವಾ ಸಾಕ್ಷರತೆಗೆ ಎಷ್ಟೋ ಸೃಜನಶೀಲತೆಗೂ ಅಷ್ಟೇ ಒತ್ತು ನೀಡುವ ತರಗತಿ ವಾತಾವರಣವು ನಂಬಿಕೆಯ ಬೇರನ್ನು ಒದಗಿಸುತ್ತದೆ. ಬೆಂಬಲ ನೀಡುವ ಓರ್ವ ಶಿಕ್ಷಕ ಗೌರವಯುತ ಮತ್ತು ಬೆಚ್ಚನೆಯ ಭಾವವನ್ನು ಉಂಟು ಮಾಡುವ ಒಬ್ಬ ಹಿರಿಯರಾಗಿ ಮಕ್ಕಳಿಗೆ ಭಾವನಾತ್ಮಕವಾಗಿ ಪೋಷಿಸುವ ಕಲಿಕಾ ಅವಕಾಶಗಳನ್ನು ಒದಗಿಸುತ್ತಾರೆ. ಜಾನ್ ಹೋಲ್ಟ್ ಅವರ ಪ್ರಕಾರ 'ಕಲಿಕೆಯು ಬೋಧನೆಯ ಫಲಿತವಲ್ಲ. ಕಲಿಕಾರ್ಥಿಗಳು ಚಟುವಟಿಕೆಯಲ್ಲಿ ನಿರತರಾಗಿರುವುದರ ಫಲಿತವೇ ಕಲಿಕೆ. ಮಕ್ಕಳಿಗೆ ಯಾವುದು ಪ್ರಯೋಜನಕಾರಿಯೋ ಅಂದರೆ ಅವರು ಅವಕಾಶ ನೀಡುವ ಇತರೆ ಮಕ್ಕಳೊಂದಿಗೆ ಇರುವುದು ಅಂತಹ ಮಾರ್ಗಗಳಿಗೆ ಅಗತ್ಯವಿದೆ. ವಾಸ್ತವವಾಗಿ 3-10 ವರ್ಷದ

ಮಕ್ಕಳ ಕಲಿಕೆಯಲ್ಲಿ ತೊಡಗಿರುವ ಶಿಕ್ಷಕ ಸಮುದಾಯದ ಮಂತ್ರ ಹೀಗಿರಬೇಕು:

1. ಪ್ರತಿಯೊಂದು ಮಗುವೂ ತಾನು ವಿಶೇಷ ಎಂಬ ಭಾವನೆ ಹೊಂದಬೇಕು.
2. ಮಕ್ಕಳು ಆಟದ ಸಂದರ್ಭಗಳಲ್ಲಿಯೇ ಅತ್ಯುತ್ತಮವಾಗಿ ಕಲಿಯುತ್ತಾರೆ.
3. ನಿಮ್ಮ ತರಗತಿಯ ಪ್ರಕ್ರಿಯೆಗಳು ಮಕ್ಕಳನ್ನು ವೈಯುಕ್ತಿಕ ನೆಲೆಯಲ್ಲಿ ತೊಡಗಿಸಿಕೊಳ್ಳುವಂತಿದೆಯೇ ಎಂಬುದರ ಬಗ್ಗೆ ಪರ್ಯಾಲೋಚಿಸಿ.

ಎಲ್ಲ ಶಿಕ್ಷಕರು ಮಗು ಕೇಂದ್ರಿತ ಬೋಧನಾ ವಿಧಾನವನ್ನು ಪರಿಚಯಿಸಿಕೊಂಡಿರಬೇಕು ಮತ್ತು ಅದನ್ನು ಚೆನ್ನಾಗಿ ಕರಗತ ಮಾಡಿಕೊಂಡಿರಬೇಕು. ಸಾಮಾನ್ಯವಾಗಿ, ಒಂದು ದೊಡ್ಡ ಗುಂಪಿನಲ್ಲಿ ತಮಗಾಗಿ ಒಂದು ಸ್ಥಳವನ್ನು ಆಕಾಂಕ್ಷಿಸಿದಾಗ ಮಕ್ಕಳ ಅಸ್ಮಿತೆಯ ಹುಡುಕಾಟವು ಕ್ರಿಯಾಶೀಲವಾಗುತ್ತದೆ. ನಾಟಕ ಸಂಬಂಧಿ ಆಟಗಳು ಗುಂಪುಕಾರ್ಯ ಮತ್ತು ವೈಯಕ್ತಿಕ ಕಾರ್ಯಗಳೆರಡಕ್ಕೂ ಒಂದಾದ ಮೇಲೆ ಇನ್ನೊಂದಕ್ಕೆ ಒತ್ತು ನೀಡುವ ಮೂಲಕ ಪ್ರತಿಯೊಬ್ಬರ ವೈಯಕ್ತಿಕತೆಯನ್ನು ಪ್ರೇರೇಪಿಸುವ ಸಾಮರ್ಥ್ಯವನ್ನು ಹೊಂದಿವೆ, ಮುಂದಿನ ಭಾಗಗಳಲ್ಲಿ ಮಕ್ಕಳು ತಾವು ಕಂಡಿದ್ದನ್ನು ಹಂಚಿಕೊಳ್ಳುವ ಮತ್ತು ಅದನ್ನು ವ್ಯಾಖ್ಯಾನಿಸುವುದನ್ನು ಪ್ರೋತ್ಸಾಹಿಸುವ ಮೂಲಕ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಬೆಂಬಲಿಸುವ ಕೆಲವು ವಿಧಾನಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಮಕ್ಕಳ ಸಣ್ಣ ಗುಂಪುಗಳನ್ನು ಮಾಡುವುದು, ಅವರು ಹಂಚಿಕೊಳ್ಳಲು ಅನುವಾಗುವಂತೆ ಬೆರೆಯುವಂತೆ ಮಾಡುವುದು, ಇವು ಮಕ್ಕಳು ಆಲೋಚಿಸುವಂತೆ ಮಾಡಲು ಪ್ರೋತ್ಸಾಹಿಸುವ ಕೆಲವು ತರಗತಿ ಮಟ್ಟದ ಚಟುವಟಿಕೆಗಳು. ಸಣ್ಣ ಗುಂಪುಗಳಲ್ಲಿ ಹಂಚಿಕೊಳ್ಳುವ ಸಂದರ್ಭಗಳಿಂದಾಗಿ ನಾಚಿಕೆ ಸ್ವಭಾವದ ಅಥವಾ ಮಾತನಾಡದೆ ಮೌನವಾಗಿರುವ ಮಕ್ಕಳಿಗೆ ವಿಶ್ವಾಸದಿಂದ ಅವರು ಧೈರ್ಯವಂತರಾಗಿ ತಮ್ಮ ಭಾವನೆಗಳನ್ನು ವಿಶ್ವಾಸದಿಂದ ವ್ಯಕ್ತಪಡಿಸಲು ಸಮೃದ್ಧ ಸಾಧ್ಯತೆಗಳು ನಿರ್ಮಾಣವಾಗುತ್ತವೆ.

**ವಿಮರ್ಶಾತ್ಮಕ ಅಲೋಚನೆಯ ಹಾದಿಯಲ್ಲಿ ಸಹಯೋಗದ ಕಲಿಕೆ**

ಐದು ಅಥವಾ ಆರು ಮಕ್ಕಳು ಉದಾಹರಣೆಗೆ, ಒಂದು ಭಾಷಾ ಪಠ್ಯದ ಒಂದು ಅಧ್ಯಾಯದ ಬೇರೆಬೇರೆ ಭಾಗಗಳನ್ನು ಆಯ್ಕೆ ಮಾಡಿ-ಕೊಂಡು ಸಣ್ಣ ಗುಂಪುಗಳಲ್ಲಿ ಚರ್ಚಿಸಿ ಅದನ್ನು ಹೇಗೆ ಪ್ರಸ್ತುತಪಡಿಸುವುದೆಂದು ಮಾತುಕತೆ ನಡೆಸುತ್ತಾರೆ. ಅವರು ಚಿತ್ರ ಬಿಡಿಸಬಹುದು ಅಥವಾ ನಾಟಕ ರೂಪದಲ್ಲಿ ತೋರಿಸಬಹುದು ಅಥವಾ ಚರ್ಚೆ ನಡೆಸಬಹುದು. ಈ ಮೂಲಕ ಮಕ್ಕಳು ಹಲವಾರು ರೀತಿಯಲ್ಲಿ ಯೋಚಿಸುತ್ತಾರೆ ಮತ್ತು ಶಿಕ್ಷಕರಿಂದ ಸಲಹೆ ಪಡೆಯತ್ತಾರೆ.

ಇಂತಹ ಪ್ರಕ್ರಿಯೆಗಳ ಮೂಲಕ ಅವರು ಚುರುಕಿನಿಂದ, ಕಾರ್ಯ-ಶೀಲರಾಗಿ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಅಲ್ಲದೆ ತಮ್ಮ ಸಹಪಾಠಿಗಳ ಕೆಲಸವನ್ನು ವಿಮರ್ಶಾತ್ಮವಾಗಿ ನೋಡುವ ಗುಣವನ್ನು ಬೆಳೆಸಿಕೊಳ್ಳುತ್ತಾರೆ. ಪರಸ್ಪರ ಗುಂಪಿನ ಸದಸ್ಯರ ಬಲಾಬಲಗಳ ಬಗ್ಗೆ ಪರಿಚಿತರಾಗುತ್ತಾರಲ್ಲದೆ ಹೆಚ್ಚು ಕೌಶಲ್ಯಪೂರ್ಣ ಚರ್ಚೆಗಳನ್ನು ನಡೆಸಲು ಪರ್ಯಾಲೋಚನೆ ಮತ್ತು ಪ್ರೇರಣೆಯನ್ನು ಹೊಂದುತ್ತಾರೆ. ಈ ಮೂಲಕ ಮಕ್ಕಳು ತಾವು ವಿಶೇಷವೆಂದು ಭಾವಿಸಿ ವಿನೋದದಿಂದಲೇ ತಲ್ಲೀನರಾಗಿ ಗುಂಪುಕಾರ್ಯದ ಶಕ್ತಿಯನ್ನು ಹೆಚ್ಚಿಸುತ್ತಾರೆ.

**ಭಾಷಾ ಶಾಸ್ತ್ರದ ತಿಳುವಳಿಕೆಯ ಮೂಲಗಳಾಗಿ ವೈಯಕ್ತಿಕ ಹೆಸರುಗಳ ಬಳಕೆ**

ತರಗತಿಯಲ್ಲಿ ಬಹಳ ಮಕ್ಕಳಿದ್ದರೂ ಇಡೀ ತರಗತಿಯಲ್ಲಿ ಅನ್ಯೋನ್ಯತೆಯನ್ನು ಉಂಟುಮಾಡುವ ಸಂವಾದವನ್ನು ನಾನು ಮುಂದಿಡುತ್ತೇನೆ. ಮತ್ತು ಚರ್ಚೆಯನ್ನು ನಾನು ನಡೆಸುತ್ತೇನೆ. ಇಲ್ಲಿ ಮಕ್ಕಳ ಹೆಸರು, ಅದರ ಅರ್ಥ, ಹೆಸರಿನಲ್ಲಿ ಯಾವ ಶಬ್ದಗಳು ಹಾಗೂ ಮಗುವಿನ ಹೆಸರು ನಿರ್ದಿಷ್ಟ ರಚನೆಯಂತೆ ಯಾವ ವಸ್ತುಗಳು, ಸ್ಥಳಗಳೊಂದಿಗೆ ಸಂಬಂಧೀಕರಿಸಿದೆ ಎನ್ನುವ ಆಟದ ಚಟುವಟಿಕೆಯನ್ನು ನಡೆಸಲಾಗುತ್ತದೆ. ಇದರಲ್ಲಿ ಮಕ್ಕಳು ತಮಗೇ ತಿಳಿಯದಂತೆ ವ್ಯಾಕರಣಾಂಶವನ್ನು ಕಲಿತಿರುತ್ತಾರೆ.

**ಹೆಸರಿನ ಆಟ**

ಈ ಚಟುವಟಿಕೆಯಲ್ಲಿ ಮಕ್ಕಳಿಗೆ ತಮ್ಮ ಹೆಸರನ್ನು ಒಂದು ಆಂಗಿಕಕ್ರಿಯೆ ಅಥವಾ ಭಾವನೆಯ ಮೂಲಕ ಹೇಳಬೇಕೆಂದು ಕೋರಲಾಗುತ್ತದೆ. ಇಡೀ ತರಗತಿಯ ಮಕ್ಕಳು ಆ ಕ್ರಿಯೆ ಮತ್ತು ಹೆಸರನ್ನು ಎರಡು ಬಾರಿ ಅನುಕರಿಸುತ್ತಾರೆ. 'ನಾನು ಶುರು ಮಾಡಬಲ್ಲೆ, ಆದರೆ ಗಜರಾಜ್ ಅಥವಾ ರೋಹಿಣಿ, ನೀವು ಹೇಳಲು ಪ್ರಯತ್ನಿಸುವಿರಾ?' ಇದನ್ನು ಪ್ರಾರಂಭ ಮಾಡುವವರು ಹಾವಭಾವಗಳ ಮೂಲಕವಾಗಲಿ ಅಥವಾ ಮುನ್ನಡೆಯುತ್ತಾ, ನನ್ನ ಹೆಸರು – ಎಂದು ಮಾತ್ರ ಹೇಳಬಹುದು.

ಶಿಕ್ಷಕರು ಖುಷಿಯಿಂದ ಇದರಲ್ಲಿ ಭಾಗಿಯಾಗುತ್ತ ಚಟುವಟಿಕೆಯು ಹುರುಪಿನಿಂದ ಸಾಗದಿದ್ದರೆ ಮಾತ್ರ ಮಧ್ಯಪ್ರವೇಶಿಸಬೇಕು. ನಿಯಂತ್ರಿತವಾಗಿ ಚಟುವಟಿಕೆ ನಡೆಯುತ್ತಿದ್ದಲ್ಲಿ ಆ ವಾತಾವರಣವನ್ನು ತಿಳಿಗೊಳಿಸಲು ಶಿಕ್ಷಕರು ಜಿಗಿಯುವುದು, ಸುತ್ತ ತಿರುಗುವುದು, ಕೈಗಳನ್ನು ಮೇಲೆತ್ತಿ ಹಾಗೂ ತಮ್ಮ ಹೆಸರನ್ನು ಹೇಳುವುದು ಅದನ್ನೇ ನಂತರ ಮಕ್ಕಳು ಪುನರಾವರ್ತಿಸುತ್ತಾರೆ. ಮಕ್ಕಳು ತಮ್ಮ ಶಿಕ್ಷಕರು ಹುರುಪಿನಿಂದ ಇರುವುದನ್ನು, ಆತ್ಮೀಯವಾಗಿ ವರ್ತಿಸುವುದನ್ನು ನೋಡಿ ಖುಷಿಪಡುತ್ತಾರೆ. ಇದು ಒಬ್ಬೊಬ್ಬರಿಂದ ಎಲ್ಲರಲ್ಲೂ ಹರಡುತ್ತದೆ. ಈ ಮೂಲಕ ಮಕ್ಕಳು ಹೆಚ್ಚಾಗಿ ಬಿಚ್ಚು ಮನಸ್ಸಿನಿಂದ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಆಶ್ಚರ್ಯ, ಧೈರ್ಯ, ಕೋಪ, ದುಃಖ ಇತ್ಯಾದಿ ಬೇರೆಬೇರೆ ಭಾವನೆಗಳನ್ನು ಅಭಿವ್ಯಕ್ತಿಸುವುದರಿಂದ ಇಡೀ ತರಗತಿ ಜೀವಕಳೆಯನ್ನು ಪಡೆಯುತ್ತದೆ.

**ಶಬ್ದಗಳನ್ನು ಗುರುತಿಸುವುದು**

ನಿಮ್ಮ ಕೈಗಳನ್ನು ಉಜ್ಜುವ ಮೂಲಕ, ಅಂಗೈಗಳಿಂದ ಹೊಮ್ಮುವ ಶಕ್ತಿಯನ್ನು ಗ್ರಹಿಸಿ ಅವಲೋಕಿಸುವುದು. ಈ ರೀತಿ ಮೊದಲ ಹೆಜ್ಜೆಯಾಗಿ ನೀವು ಆಟದ ನಿಯಮಗಳನ್ನು ಈ ಕೆಳಗಿನಂತೆ ಸರಿಯಾಗಿ ರೂಪಿಸಬೇಕು.

1. ಮೊದಲು ಒಬ್ಬೊಬ್ಬರಾಗಿ ನೀವು ಹೆಸರುಗಳನ್ನು ಕರೆಯಿರಿ.
2. ನಂತರ ಮಕ್ಕಳಿಗೆ ಹೀಗೆ ಹೇಳಿ: ಈಗ ನಾವು ನಮ್ಮ ಹೆಸರಿನ ಮೊದಲ ಶಬ್ದವನ್ನು ಕೇಳೋಣ.
3. ಆ ಮೊದಲ ಶಬ್ದಕ್ಕೆ ಹೊಂದಿಕೆಯಾಗುವ ಒಂದು ಪದವನ್ನು ಹೇಳಿ.
4. ಈವರೆಗೆ ಹೇಳಿರುವುದನ್ನು ಅರ್ಥೈಸಿಕೊಳ್ಳಲು ಮಕ್ಕಳಿಗೆ ಅವಕಾಶ ನೀಡಿ.
5. ಸೂಚನೆಗಳು ಸರಿಯಾಗಿ ಅರ್ಥವಾಗದಿದ್ದರೆ ಮಧ್ಯಪ್ರವೇಶ ಮಾಡಿ ಉದಾಹರಣೆಗಳನ್ನು ನೀಡಿ.

6. ಮಕ್ಕಳು ಈ ಆಟದಲ್ಲಿ ಪಾಲ್ಗೊಳ್ಳುತ್ತಾ ಪ್ರತಿಯೊಬ್ಬರ ಪ್ರತಿಕ್ರಿಯೆಗಳನ್ನು ಮತ್ತು ಹೊಂದುವ ಪದಕ್ಕೆ ಸಮವಾದಿ–ಯಾದ ಶಬ್ದಗಳ ನಿಖರತೆಯನ್ನು ತಾವೇ ನಿರ್ಣಯಿಸಲು ಬಿಡಿ.

ಇಲ್ಲಿ ಮಕ್ಕಳಿಂದ ಹಲವಾರು ಪ್ರತಿಕ್ರಿಯೆಗಳು ಬರುತ್ತವೆ. ಮಕ್ಕಳ ಭಾಷಾ ಕಲಿಕೆ ಮತ್ತು ಗ್ರಹಿಕೆಯ ಮಟ್ಟವನ್ನು ಅವಲಂಬಿಸಿ ಶಿಕ್ಷಕರು ಮಧ್ಯಪ್ರವೇಶ ಮಾಡಬೇಕು. ಪೂರ್ವಪ್ರಾಥಮಿಕ ಹಂತದ ಮಕ್ಕಳಿಗೆ ಆಟವನ್ನು ಕೇವಲ ಶಬ್ದಗಳಿಗೆ ಸೀಮಿತಗೊಳಿಸಬಹುದು. ಉದಾಹರಣೆಗೆ, 'ಸ್ನೇಹ' ಎಂಬ ಪದಕ್ಕೆ 'ಸ್ನಾಯು' ಎಂದು ಹೇಳಿದರೆ ಶಬ್ದ ವ್ಯತ್ಯಾಸದ ಬಗ್ಗೆ ಮಾತ್ರ ಮಾತನಾಡಿ. ಏಕೆಂದರೆ ಇಲ್ಲಿ ಸೂಕ್ಷ್ಮ ವ್ಯತ್ಯಾಸವಿರುತ್ತದೆ.

ಹಿರಿಯ ಮಕ್ಕಳಿಗೆ ಹೃಸ್ವ ಮತ್ತು ದೀರ್ಘಸ್ವರಗಳ ಶಬ್ದಗಳು, ಒತ್ತಕ್ಷರಗಳುಳ್ಳ ಪದಗಳ ಬಗ್ಗೆಯೂ ತಿಳಿಸಿ ಹೇಳಿ. ಉದಾಹರಣೆಗೆ, ಶರದ್ ಎಂಬ ಪದಕ್ಕೆ ಶಪಥ ಎಂದರೆ ಪರವಾಗಿಲ್ಲ. ಆದರೆ 'ಥ'ದಲ್ಲಿ ಮಹಾಪ್ರಾಣ ಇರುವ ವ್ಯತ್ಯಾಸವನ್ನು ತಿಳಿಸಬೇಕು. ಒಂದು ವೇಳೆ 'ಶಂಖ' ಎಂಬ ಪದ ಹೇಳಿದರೆ ಅನುಸ್ವಾರ 'ಂ' ಅಕ್ಷರದ ಇರುವಿಕೆಯ ಬಗ್ಗೆ ತಿಳಿಸಬೇಕು.

**ನಾಮಪದಗಳನ್ನು ಗುರುತಿಸಲು ಹೆಸರುಗಳನ್ನು ಬಳಸುವುದು**

ಹಿರಿಯ ತರಗತಿಯ ಮಕ್ಕಳಿಗೆ ಹೆಚ್ಚು ಸಂಕೀರ್ಣವಾದ ಪದಗಳನ್ನು ಬಳಸಲು ಹೇಳಬಹುದು. ಹೆಸರಿನ ಮೊದಲ ಶಬ್ದದ ನಿಯಮವನ್ನು ಬಳಸಿ ಮಕ್ಕಳು ಆ ಶಬ್ದಕ್ಕೆ ಹೊಂದುವ ಒಂದು ಸ್ಥಳ, ವ್ಯಕ್ತಿ ಅಥವಾ ವಸ್ತುವನ್ನು ಹೇಳಬೇಕು. ಉದಾಹರಣೆಗೆ, ಮಗುವಿನ ಹೆಸರು ಪಾವನ ಆಗಿದ್ದರೆ ಪಾಟ್ನಾ, ಪಾತರಗಿತ್ತಿ, ಪತ್ರ, ಪದಕ, ಪಲ್ಲಂಗ, ಪೆಟ್ಟಿಗೆ ಪುಷ್ಕರ ಎಂಬೆಲ್ಲಾ ಪದಗಳನ್ನು ಹೇಳಬಹುದು.

ಶಬ್ದಗಳನ್ನು ವಿಸ್ತರಿಸಲು ಇದು ಉತ್ತಮ ಸಮಯವಾಗಿದ್ದು ಶಬ್ದಗಳನ್ನು ವಿಸ್ತರಿಸುವ ಚಿಹ್ನೆಯ ಕನ್ನಡ ಪದವನ್ನು ಮಾತ್ರೆ ಎಂದು ಸೂಚಿಸಲಾಗುತ್ತದೆ ಎಂದು ತಿಳಿಸಬಹುದು. ಆಟ ಮುಂದುವರೆ–ದಂತೆ ನೀವು ಪರ್ಯಾಲೋಚಿಸಿ ಹೆಚ್ಚುಹೆಚ್ಚು ಪರಿಕಲ್ಪನೆಗಳನ್ನು ಸೇರಿಸಬಹುದು. ಉದಾಹರಣೆಗೆ, ಇಂಗ್ಲಿಷ್ ಭಾಷೆಯಲ್ಲಿ ಮಗುವಿನ ಹೆಸರು ಮಧುರ್ ಎಂದಿದ್ದರೆ ಮಗು, ಮಂಕಿ, ಮದರ್, ಮತ್ತು ಮಿರ್‌ಜಾಪುರ್ ಅಥವಾ ಮ್ಯಾಂಗೋ ಇತ್ಯಾದಿ ಪದಗಳನ್ನು ಹೇಳಬಹುದು. ನಂತರ ಇಲ್ಲಿ ಮಂಕಿ ಮತ್ತು ಮದರ್ ಸಾಮಾನ್ಯ ಪದಗಳು ಮತ್ತು ಇವು ವ್ಯಕ್ತಿಗಳ ಹೆಸರಾಗಿರದೆ ನಿರ್ದಿಷ್ಟ ಗುಂಪಿನ ವರ್ಗಗಳ ಹೆಸರುಗಳು. ಇವುಗಳನ್ನು ನಾಮಪದಗಳು ಎನ್ನುತ್ತಾರೆ. ಇವು ಪ್ರಾಣಿಗಳು, ಹಣ್ಣುಗಳು ಇತ್ಯಾದಿ ವರ್ಗಗಳಿಗೆ ಸೇರಿದ ಪದಗಳು ಎಂದು ಹೇಳುತ್ತಾ ನಾವು ಹೆಚ್ಚು ತಿಳುವಳಿಕೆಯನ್ನು ಅವರಿಗೆ ನೀಡಬಹುದು.

ಇದು ಚಟುವಟಿಕೆಯಲ್ಲಿ ತೊಡಗುವ ಮಕ್ಕಳ ಆಸಕ್ತಿ ಪರಿಗಣಿಸಿ ತಮ್ಮನ್ನು ಒಳಗೊಳ್ಳಲಾಗಿದೆಯೆಂಬ ಅವರ ಬಯಕೆಯನ್ನೂ ಪರಿಗಣಿಸಿ, ಮಗುವಿನ ಕ್ರಿಯಾಶೀಲತೆಯ ಜೊತೆಗೆ ಭಾಷಾ ಶಾಸ್ತ್ರದ ತಿಳುವಳಿಕೆಯನ್ನೂ ಹೆಚ್ಚಿಸುವ ಬಹಳ ಯಶಸ್ವಿ ಆಟವಾಗಿದೆ. ಈ ಹಿಂದೆ ಹೇಳಿದಂತೆ ಮಾತ್ರೆಯ ಈ ಚಟುವಟಿಕೆಯನ್ನು ಪರೀಕ್ಷೆಗೆ ಒಳಪಡಿಸಿ ಅವಲೋಕಿಸಿದರೆ– ಪ್ರತಿಯೊಂದು ಮಗುವೂ ತಾನು ವಿಶೇಷ ಎಂದು ಭಾವಿಸುತ್ತದೆ. ಆಟವನ್ನು ಕಲಿಕೆಯ ಅವಕಾಶ ಎಂದು ಭಾವಿಸುವಂತೆ ವೈಯಕ್ತಿಕವಾಗಿ ಮಕ್ಕಳು ತಲ್ಲೀನರಾಗುತ್ತಾರೆ. ಎಲ್ಲವೂ ಚೆನ್ನಾಗಿ ನಡೆಯುತ್ತದೆ. ಇದರ ಜೊತೆಜೊತೆಗೆ ಶಿಕ್ಷಕರು ತರಗತಿಯಲ್ಲಿ ಉತ್ಸಾಹವಿದೆಯೇ ಹಾಗು ಈ ಕುರಿತಾದ ಪ್ರಕ್ರಿಯೆಯ ಬಗ್ಗೆ ಆಡುತ್ತಿರುವ ಆಟ ನಿಜಕ್ಕೂ ಮಂತ್ರೌಷಧಿಯಂತಿದೆಯೇ? ಎಂದು ಆಲೋಚಿಸಬೇಕು.

ಅಂತಹ ಪರಸ್ಪರ ಕಾರ್ಯ ನಡೆಸುವ ಮಕ್ಕಳ ಮುಂದೊಡಗಿನ ಪ್ರತಿಕ್ರಿಯೆಯು ಅನುಸರಣೆ ಮತ್ತು ಏಕರೂಪತೆಯ ಸಂಕೇತಗಳಾಗುತ್ತವೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಪ್ರತಿಯೊಬ್ಬರೂ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುವಲ್ಲಿ ಭಾವನಾತ್ಮಕರಾಗಿ ಪುಳಕಿತರಾಗುತ್ತಾರೆ ಮತ್ತು ಖುಷಿಯಾಗಿರುತ್ತಾರೆ. ಪದಗಳು ಮತ್ತು ಶಬ್ದಗಳೊಂದಿಗೆ ಮಕ್ಕಳು ಆಟವಾಡುತ್ತಿದ್ದಂತೆ ತಮ್ಮನ್ನು ವ್ಯಕ್ತಪಡಿಸಲು ಅವರಿಗೆ ಅವಕಾಶಗಳು ಸಿಗುವುದು ಮಾತ್ರವಲ್ಲ ಇದು ಅವರ ಕುತೂಹಲಕ್ಕೆ ಪ್ರೇರಣೆಯಾಗುತ್ತದೆ. ಆಗ ದೊಡ್ಡ ತರಗತಿಯೂ ಕೂಡ ಒಂದು ಸುರಕ್ಷಿತವಾದ, ಭಯವಿಲ್ಲದ ವೈಯಕ್ತಿಕ ವಾತಾವರಣವಾಗಿ, ಅರ್ಥ ನೀಡುವುದರಲ್ಲಿ ಕಾಣುವ ವ್ಯತ್ಯಾಸಗಳನ್ನು ಕೇಳುವ ಒಂದು ವೇದಿಕೆಯಾಗುತ್ತದೆ.

**ಕಲಿಕೆಯಾಗಿ ಅನ್ವೇಷಣೆ**

ಪೋಷಕರು ತಮ್ಮ ಮಕ್ಕಳು ಒತ್ತಡವಿಲ್ಲದ ಪರಿಸರದಲ್ಲಿದ್ದು, ಸಂತೋಷದಿಂದ ಅನ್ವೇಷಣೆಯಲ್ಲಿ ತೊಡಗಿ ಪ್ರಯೋಗ ಮಾಡಲು ಹಿಂಜರಿಯದೆ ಇರುವುದನ್ನು ಕಂಡು ನಿರಾಳವಾಗಿ ಸಂತುಷ್ಟ–ರಾಗುತ್ತಾರೆ. ಪ್ರಾರಂಭಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಪಠ್ಯ ವಿಷಯಗಳ ಒತ್ತಡವಿಲ್ಲದ ನೋಡುವಿಕೆ ತೊಡಗಿಕೊಳ್ಳುವಿಕೆಗೆ ಮತ್ತು ಅನ್ವೇಷಣೆಗೆ ಫಿನ್‌ಲ್ಯಾಂಡಿನ ಶಾಲೆಗಳು ನಿದರ್ಶನ–ಗಳಾಗಿವೆ, ಈ ಲೇಖನದಲ್ಲಿ ದೈಹಿಕ ಚಟುವಟಿಕೆಯಿಂದ ಮಕ್ಕಳು ಚೆನ್ನಾಗಿ ಕಲಿಯುತ್ತಾರೆಂದು ಹೇಳುವಂತೆಯೇ, ತಾಜಾ ಗಾಳಿ, ಪ್ರಕೃತಿ ಮತ್ತು ನಿಯಮಿತ ದೈಹಿಕ ಚಟುವಟಿಕೆಗಳು ಹಾಗು ವಿರಾಮಗಳು ಕಲಿಕೆಯ ಪ್ರೇರಕಗಳು ಎಂದು ಪರಿಗಣಿತವಾಗುತ್ತದೆ.. ನಮ್ಮ ತರಗತಿಗಳು ಮಕ್ಕಳ ಮೆದುಳನ್ನು ಮಾತ್ರ ಮುಖ್ಯವೆಂದು ಪರಿಗಣಿಸುತ್ತವೆ, ಇತರೆ ಅಂಗಗಳಾದ, ಹೃದಯ ಹಾಗೂ ದೇಹ ಕೇವಲ ಮನೋ ಪ್ರಕ್ರಿಯೆಗಳನ್ನು ಬೆಂಬಲಿಸುವ ಅಂಗಗಳೆಂಬ ಭಾವನೆಯಿದೆ! ಹೆಚ್ಚಿನ ಸಂದರ್ಭದಲ್ಲಿ, ಮಕ್ಕಳು ತರಗತಿಯಲ್ಲಿ ಸ್ಥಿರತೆಯಲ್ಲಿರದಿದ್ದರೆ ಅವರನ್ನು ಚಡಪಡಿಕೆಯಿಂದ ಕೂಡಿರುವ, ಅತಿಚಟುವಟಿಕೆಯ ಮಗು ಎಂದು ಪರಿಗಣಿಸಲಾಗುತ್ತದೆ. ಭೌತಿಕ ಅನ್ವೇಷಣೆಗಳು, ಸಂಭಾಷಣೆ, ಮಾತುಕತೆ ಮತ್ತು ಹೆಚ್ಚು ಅನುಭವಸ್ಥರ ಸಂಪರ್ಕ, ಇವೆಲ್ಲದರ ಮೂಲಕ ಮಗುವಿನ ಬೆಳವಣಿಗೆ ಅತ್ಯುತ್ತಮವಾಗಿ ಆಗುತ್ತದೆ. ಹೃದಯ, ತಲೆ ಮತ್ತು ಕೈಗಳು ಪ್ರಬಲ ತಂಡವಾಗಿ ಕಾರ್ಯ ನಿರ್ವಹಿಸುತ್ತವೆ.

ಶಿಕ್ಷಣ ಕ್ಷೇತ್ರದಲ್ಲಿ, ನಗರದ ಬಡ ಮಕ್ಕಳು ಮತ್ತು ಗ್ರಾಮೀಣ ಮಕ್ಕಳ ತರಗತಿಗಳಿಗೆ ಕುರಿತಾಗಿ, ಆ ಮಕ್ಕಳ ವಸತಿ ಪ್ರದೇಶಗಳು ಅವರಿಗೆ ಸಂಪನ್ಮೂಲಗಳನ್ನು ದಕ್ಕಿಸಿಕೊಳ್ಳುವಲ್ಲಿ ಇರಬೇಕಾದ ಅಗತ್ಯ ಅಭ್ಯಾಸಗಳ ಕೊರತೆಯಿಂದ ಕೂಡಿವೆ ಎನ್ನುವ ಭಾವನೆಯಿದೆ. ಶೈಕ್ಷಣಿಕ ವಿಷಯಾಂಶಗಳು, ಪರೀಕ್ಷೆಗಳನ್ನು ನಿಯಂತ್ರಿಸುವ ಮತ್ತು ಪಠ್ಯಕ್ರಮದ ವಿನ್ಯಾಸಗೊಳಿಸುವಂತಹ ಮಧ್ಯಮ ವರ್ಗದ ದೃಷ್ಟಿಕೋನದಿಂದ ಚಾಲಿತವಾಗುತ್ತವೆ. ನಗರಗಳ ಕಡಿಮೆ ಆದಾಯದ ನೆಲೆಗಳಲ್ಲಿ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣುವ, ಹತ್ತು ಹಕ್ಕಿಗಳು/ಪಕ್ಷಿಗಳು ಅಥವಾ ಹತ್ತು ಸಾಮಾನ್ಯ ಮರಗಳು ಅಥವಾ ಹತ್ತು ವಿಧಗಳ ಮಾರುಕಟ್ಟೆ ಲಕ್ಷಣಗಳನ್ನು ಕೇಳಿ ಮಕ್ಕಳನ್ನು ಪರೀಕ್ಷಿಸುವ ಆಲೋಚನೆಯೇ ಬರುವುದಿಲ್ಲ. ನಮ್ಮ ಪ್ರಶ್ನೆಗಳು ಯಾವಾಗಲೂ ಸಾರಿಗೆ ವಿಧಾನಗಳು, ಜ್ಯಾಮಿತೀಯ ಆಕೃತಿಗಳನ್ನು ಹೊಂದಿಸುವುದು ಮತ್ತು ಇತರೆ ಔಪಚಾರಿಕ ಶಾಲಾ

ವಿಚಾರಗಳಿಗೆ ಸಂಬಂಧಿಸಿರುತ್ತವೆ. ಬೇರೆಬೇರೆ ದೂರದ ಸ್ಥಳಗಳಲ್ಲಿ ಬೆಳೆದ ಅತ್ಯಂತ ಬಡ ಕುಟುಂಬಗಳ ಮಕ್ಕಳು ಅಥವಾ ಗುಂಪುಗಳಿಗೆ ಇವುಗಳ ಪ್ರಯೋಜನಗಳು ಬೇಕು ಎಂಬ ನಂಬಿಕೆ ಹಾಗೆ ಇರುತ್ತದಾದರೂ, ಈ ಮಕ್ಕಳು ತಮ್ಮ ನಗರದ ಸಹಪಾಠಿಗಳಿಗಿಂತ ಹೇಗೆ ಭಿನ್ನ ಎಂಬುದರ ಬಗ್ಗೆ ಗಮನ ಹರಿಸುವುದೇ ಇಲ್ಲ. ವಾಸ್ತವವಾಗಿ, ಪ್ರತಿಯೊಂದು ಗುಂಪಿಗೂ ತಮ್ಮದೇ ಆದ ಬಲ, ಕೌಶಲಗಳಿರುತ್ತವೆ ಉದಾಹರಣೆಗೆ, ಒಂದು ರಾಷ್ಟ್ರೀಯ ಮಕ್ಕಳ ಕಲಾ ಮೇಳದಲ್ಲಿ, ನಗರದ ವಿದ್ಯಾರ್ಥಿಗಳು, ಗುಂಪು ಕುಣಿತ ಅಥವಾ ವಾದ್ಯಗಳನ್ನು ನುಡಿಸುವುದು ಅಥವಾ ಒಟ್ಟಿಗೆ ಹಾಡು ಹೇಳುವುದು ಅಥವಾ ಬುಟ್ಟಿ ಹೆಣೆಯುವುದು ಇತ್ಯಾದಿಗಳಲ್ಲಿ, ತಮ್ಮಲ್ಲಿ ಕೆಲವರಿಗೆ ಮಾತ್ರ ಇಂತಹ ಕೌಶಲವಿದೆಯೆಂದು ಅರಿತುಕೊಂಡರು. ಇದರ ಜೊತೆಗೆ, ಸಮುದಾಯದ ಭಾಗವಾಗಿ ಬೆಳೆದ ಹಳ್ಳಿಯ ಅಥವಾ ಬಡ ಮಕ್ಕಳು ಹಲವಾರು ಇಂತಹ ಕುಶಲ ಕಲೆಗಳನ್ನು ತಿಳಿದಿರುವವರೆಂದು, ಇವರಲ್ಲಿ ಕೆಲವು ಮಕ್ಕಳು ಅಂತಹ ಸಾಂಪ್ರದಾಯಿಕ ಕಲಾಕಾರರ ಮನೆಗಳಿಂದ ಬಂದವರು ಎನ್ನುವುದನ್ನು ಅವರು ಅರಿತರು.

ಕೆಲವೊಮ್ಮೆ ಮಕ್ಕಳಿಗೆ ಅಕ್ಷರಜ್ಞಾನ ಇಲ್ಲದಿರಬಹುದಾದರೂ, ಕತೆ ಹೇಳುವ ಚಟುವಟಿಕೆಯನ್ನು ರಾಜಸ್ತಾನದ ಫಡ್ ಕಥಾ ಕಲಾ ಪ್ರಕಾರವಾಗಿ ಪ್ರದರ್ಶಿಸಬಲ್ಲರು. ನಗರದ ವರದಿಗಾರರು ಮಕ್ಕಳ ಕೌಶಲದಿಂದ ಆಕರ್ಷಿತರಾದರೂ, ಕೇವಲ ಬಾಯಿ ಮಾತಿನ ಉಪಚಾರವಾಗಿ ಅದನ್ನು ಹೊಗಳುತ್ತಾರೆ. ಆದರೆ ನಿಜವಾಗಿ ಮಕ್ಕಳ ಕೌಶಲದ ಆಳವನ್ನು ಅರಿತಿಲ್ಲ. ಆದ್ದರಿಂದಲೇ ಈ ವರದಿಗಾರರು ಅವರಿಗೆ ಶಾಲೆಯಲ್ಲಿ ಅವರು ಏನು ಕಲಿತೇ? ಅಲ್ಲಿ ನಿನಗೆ ಇಷ್ಟವಾಗುತ್ತದೆಯೇ ಎಂಬ ಪ್ರಶ್ನೆಗಳನ್ನು ಕೇಳುತ್ತಾರೆ. ಹೀಗಾಗಿ ಈ ಮೂಲಕ ಸಮುದಾಯಕ್ಕೆ ಸಂದೇಶವೆಂದರೆ, ಜಾನಪದ ಕಲೆ ಮತ್ತು ಕೌಶಲಗಳು ಅತ್ಯುತ್ತಮ ಮತ್ತು ಅಮೂಲ್ಯವಾದವು, ಆದರೆ ನಮ್ಮ ದೇಸಿ ಕಲೆಗಳು, ನೀವು ಆಧುನಿಕ ಜೀವನ ಶೈಲಿಗೆ ಮತ್ತು ಬದುಕಿಗೆ ಅವುಗಳನ್ನು ಹೇಗೆ ಒಗ್ಗಿಸಿಕೊಳ್ಳುತ್ತೀರಿ? ಸಾಕ್ಷರತೆಯು ಒಂದು ಪ್ರಮುಖ ಸಾಧನ ಎಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಅದು ಅನಕ್ಷರಸ್ಥರ ಕೌಶಲಗಳಿಗೆ ಸಂಬಂಧಪಟ್ಟ ಗ್ರಹಿಕಾ ಸಾಮರ್ಥ್ಯದ ನಿರಾಕರಣೆ ಮಾಡಬೇಕಾಗಿಲ್ಲ.

**ಸಂಪನ್ಮೂಲವಾಗಿ ಪ್ರಕೃತಿ**

ಮಕ್ಕಳು ಹುಡುಕಾಟದಲ್ಲಿ ತೊಡಗಿರುವ ಆಸಕ್ತರು ಮತ್ತು ಅವರು ಸದಾ ಸಹಜ ಕುತೂಹಲಿಗಳಾಗಿರಬೇಕು. ಏಕೆಂದರೆ ಇದು ತಾವೇ ಒಮ್ಮೆ ಮಕ್ಕಳಾಗಿದ್ದೇವೆಂಬ ಮಸುಕು ನೆನಪನ್ನು ಹೊಂದಿರುವ ಜನರಿಂದ ನಿಯಂತ್ರಿತವಾದ ಪ್ರಪಂಚದಲ್ಲಿ 'ಉಳಿಯಲು' ಮಕ್ಕಳಿಗೆ ಅಗತ್ಯವಿರುವ ಒಂದು ಕೌಶಲವಾಗಿದೆ. ಬಾಲ್ಯಕ್ಕೆ ಸುಲಭವಾಗಿ ತೆರೆದುಕೊಳ್ಳುವುದು ಶಿಕ್ಷಕರಿಗೆ ಉಪಯುಕ್ತವಾದವು. ಪ್ರಕೃತಿ, ಮಾಹಿತಿ ಜೋಡಣೆ, ಗೆಳೆಯರ ಜೊತೆಗೂಡಿ ಹೊರಪ್ರಪಂಚದಲ್ಲಿ ಹುಡುಕಾಟ ಇವೆಲ್ಲವೂ ಎಲ್ಲಾ ಕಾಲಕ್ಕೂ ಮಕ್ಕಳಿಗೆ ಬಹಳ ಇಷ್ಟವಾಗುವ ಪ್ರಿಯವಾದ ಚಟುವಟಿಕೆಗಳು. ಈ ಹಿಂದೆ ಹೇಳಿದಂತೆ, ಮಕ್ಕಳು ಕ್ರಿಯಾಶೀಲರಾಗಿ ಅರ್ಥ ರೂಪಿಸುವಂತಹವರು ಮತ್ತು ತಮ್ಮ ನೆಲೆಗಳಿಂದ ಪ್ರಭಾವಿತರಾದವರು. 15 ವರ್ಷದೊಳಗೆ ಒಂದು ಹಳ್ಳಿಯ ಮಗು ಎಷ್ಟೋ ಕರುಗಳು ಹುಟ್ಟಿರುವುದನ್ನು ನೋಡಿರುತ್ತದೆ. ಹೀಗಾಗಿ ಬೆಳೆದ ನಂತರ ಅದು ಬಸುರಿ ಹೆಂಗಸು ಹೆರಿಗೆಯ ವೇಳೆ ಅನುಭವಿಸುವ ನೋವನ್ನು ಗುರುತಿಸಿ ಅರಿಯುತ್ತದೆ.

ದೈಹಿಕ ಕೌಶಲಗಳು ನಮ್ಮ ದೈನಂದಿನ ಸಂಪನ್ಮೂಲಗಳಿಂದ ರೂಪುಗೊಳ್ಳುತ್ತವೆ. ಸಾರಿಗೆ ಇಲ್ಲದ ಸ್ಥಳದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ನಡಿಗೆ ಮಾತ್ರ ಸಾಧ್ಯವಾಗಿರು-ವುದರಿಂದ ವೇಗವಾಗಿ ಓಡುವ ಕೌಶಲವು ಚುರುಕಾಗಿರುತ್ತದೆ. ನದಿಯಲ್ಲಿ ಸಣ್ಣ ಕಲ್ಲುಗಳನ್ನು ಎಸೆದು ಉಂಟಾಗುವ ಅಲೆಗಳನ್ನು ಅಥವಾ ಅದರ ಆಳವನ್ನು ನೋಡಲು ಮತ್ತೆಮತ್ತೆ ಕಲ್ಲೆಸೆಯುವ ಕೆಲಸದಲ್ಲಿ ಮಕ್ಕಳು ಕಾಲ ಕಳೆಯಬಹುದು. ತೆಲಂಗಾಣದ ಬುಡಕಟ್ಟು ಜನರ ಜೊತೆಗೆ ಕೆಲಸ ಮಾಡುವಾಗ ಒಂದು ಮಗು ಗಾಳಿಯಲ್ಲಿ ಒಂದು ಕಲ್ಲನ್ನು ಎಸೆದರೆ ಅದು ಅಲ್ಲಿಯೇ ನಿಲ್ಲಲು ಯಾವ ರೀತಿಯ ಬಲ ಬೇಕು ಎಂದು ಕೇಳಿತೆಂಬ ತಮ್ಮ ಅನುಭವವನ್ನು ಒಬ್ಬ ಹಳ್ಳಿ ಶಿಕ್ಷಕರು ಹಂಚಿಕೊಂಡಿದ್ದಾರೆ. ಆ ಮಗುವಿಗೆ ಕಲ್ಲನ್ನು ಎಸೆದರೆ ಗಾಳಿಯಲ್ಲೇ ಇರಲು ಯಾವ ರೀತಿಯ ಬಲ ಬೇಕೆಂಬ ಪ್ರಶ್ನೆಯಿತ್ತು. ಹೊಸ ಯುಗದ ನ್ಯೂಟನ್‌ನಂತಹ ಈ ಮಗುವಿಗೆ ಇಂತಹ ಹಲವು ಶೋಧನೆಯನ್ನು ಮಾಡಲು ಪ್ರೋತ್ಸಾಹಿಸಬೇಕು. ಏಕೆಂದರೆ ಆ ಮಗುವಿಗೆ ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸುವ ಮತ್ತು ಪ್ರಶ್ನೆ ಮಾಡುವ ಮನಸ್ಸಿದೆ. ನೈಸರ್ಗಿಕ ಆಗುಹೋಗುಗಳನ್ನು ತಿಳಿಯುವ ಹಂಬಲವಿದೆ. ಇಂತಹ ಪ್ರಶ್ನೆಗಳ ಕೆಲವು ಉದಾಹರಣೆಗಳು ಹೀಗಿವೆ:

- ತರಗತಿಯಲ್ಲಿ ಟೀಚರ್ ತೋರಿಸುವಂತೆ ಹಕ್ಕಿ/ಪಕ್ಷಿಗಳು ತ್ರಿಕೋನಾಕಾರದಲ್ಲೇಕೆ ಹಾರುತ್ತವೆ?

- ಎಲ್ಲಾ ಮರಗಳಲ್ಲಿ ಎಲೆಗಳಿವೆ, ಆದರೆ ಎಲ್ಲಾ ಎಲೆಗಳು ಬೇರೆ ಬೇರೆಯೇಕೆ? ... ಅವು ಬಹುತೇಕ ತ್ರಿಕೋನಾಕಾರದಲ್ಲಿ ಏಕಿವೆ?

- ಒಮ್ಮೆ ಶಾಲೆಯಲ್ಲಿ ಓದದ ಹಿರಿಯ ಹುಡುಗರ ಒಂದು ಗುಂಪು ವೃತ್ತವನ್ನು ಬರೆಯಲು ದಿಕ್ಸೂಚಿಯನ್ನು ಬಳಸಲು ಇಷ್ಟಪಡಲಿಲ್ಲ. ಇದನ್ನು ನೋಡಿ ನಗರದ ಹುಡುಗರಿಗೆ ಆಶ್ಚರ್ಯವಾಯಿತು. ಶಿಕ್ಷಕರಿಗೆ ಮಕ್ಕಳ ಬಗ್ಗೆ ಗೊತ್ತಿತ್ತು. ಅವರು ಮಕ್ಕಳಿಗೆ ಒಂದು ಬಾವಿಯನ್ನು ಅಗೆಯಲು ಒಂದು ವೃತ್ತವನ್ನು ಬರೆಯಲು ಅವರಿಗೆ ಹೇಳಿದರು. ಜ್ಯಾಮಿತಿ ಬಾಕ್ಸನ್ನು ಬಳಸಲು ಗೊತ್ತಿರದ ಆ ಮಕ್ಕಳು ಒಂದು ದೊಡ್ಡ ಮೊಳೆಯನ್ನು ತಂದು ಅದಕ್ಕೆ ದಾರವನ್ನು ಸುತ್ತಿ ಒಂದು ಪರಿಪೂರ್ಣವಾದ ವೃತ್ತವನ್ನು ಬರೆದರು!

ಮಕ್ಕಳು ಅವಲೋಕಿಸುವುದು ಮತ್ತು ಅವರು ಆಟದ ಸಮಯದಲ್ಲಿ ಅವಲೋಕಿಸುವುದು ಆಸಕ್ತಿದಾಯಕವಾದ ತರಗತಿಯ ಚಟುವಟಿಕೆಗಳನ್ನು ನಿರ್ಮಿಸಲು, ಒಳನೋಟವನ್ನು ನೀಡುತ್ತದೆ. ನಗರದ ಶಾಲೆಗಳಲ್ಲಿನ ಮಕ್ಕಳು ಕೂಡ ನೆಲದ ಮೇಲೆ ಬಿದ್ದಿರುವ ಎಲೆಗಳು, ಕಡ್ಡಿಗಳು ಅಥವಾ ಕಲ್ಲುಗಳನ್ನು ತೆಗೆದುಕೊಂಡು ಅದರಿಂದ ಆಕಾರಗಳನ್ನು ಮಾಡಬಹುದು. ಅಥವಾ ಸ್ಥಳೀಯ ಸುಂದರವಾದ ರಂಗೋಲಿ ವಿನ್ಯಾಸಗಳನ್ನು ಮೂಡಿಸಬಹುದು. ಪ್ರಾದೇಶಿಕ ಗಣಿತ, ವಿನ್ಯಾಸ ಮತ್ತು ಆಕಾರಗಳ ಬಗ್ಗೆ ತಿಳುವಳಿಕೆಗಳಿಗೆ ವಿನ್ಯಾಸಗಳ ಪುನರಾವರ್ತಿತ ರೇಖಾ ರಚನೆಗಳು ಒಳ್ಳೆಯ ತಿಳುವಳಿಕೆಯನ್ನು ಉಂಟುಮಾಡುತ್ತವೆ.

**ಶಿಕ್ಷಕರ ಪರ್ಯಾಲೋಚನೆಗಳು**

ಶಿಕ್ಷಕರೊಂದಿಗಿನ ನನ್ನ ಮುಖಾಮುಖಿಯಲ್ಲಿ, ಅವರು ಹೆಮ್ಮೆಯಿಂದ ತಮ್ಮ ಯಶಸ್ಸುಗಳ ಬಗ್ಗೆ ವಿವರಿಸುವುದನ್ನು ನಾನು ಆಲಿಸಿದ್ದೇನೆ. ಒಬ್ಬ ಶಿಕ್ಷಕರು ಮರಗಳನ್ನು ಅಧ್ಯಯನ ಮಾಡಲು, ಮಕ್ಕಳಿಗೆ ಆಟಗಳನ್ನು ಆಡಿಸಲು, ಬೇರೆಬೇರೆ ವಸ್ತುಗಳನ್ನು ತರಲು, ಆ ವಸ್ತುಗಳ ಹೆಸರನ್ನು ಇಂಗ್ಲಿಷಿನಲ್ಲಿ ಮಕ್ಕಳಿಗೆ ಕಲಿಸಲು, ಮಕ್ಕಳನ್ನು ಹೊರಾಂಗಣಕ್ಕೆ ಕರೆದುಕೊಂಡು ಹೋಗಲು ಬಯಸಿದರು. ಅವರು ಗುಂಪು ಕಲಿಕೆಯನ್ನು ಉತ್ತೇಜಿಸಲು ಮತ್ತು ಸಣ್ಣ ಗುಂಪಿನಲ್ಲಿ

ಆಟಗಳನ್ನು ಆಡಿಸಲು ಬಹಳ ಉತ್ಸುಕರಾಗಿದ್ದರು. ಹಾಗೆಯೇ ಕಾಗುಣಿತ ಕಲಿಕೆ ಅಥವಾ ಆಕಾರ ರಚನೆಗಳಿಗೆ ನೆರವು ನೀಡುವ ಚಟುವಟಿಕೆಗಳನ್ನು ಮಾಡಿಸಲು ಆಸಕ್ತರಾಗಿದ್ದರು.

ಮಕ್ಕಳನ್ನು ಚೆನ್ನಾಗಿ ಅರಿತ ಅವರು ತರಗತಿಯಿಂದ ಬಯಲಿನ ಕಲಿಕೆಗೆ ಪರಿವರ್ತನೆಗೊಳ್ಳುವುದು ಕಷ್ಟವೆಂದು ತಿಳಿದಿದ್ದರು. ಆದರೆ ಆ ಕ್ಷಣದಲ್ಲಿ ಅವರು ಮಕ್ಕಳಿಗೆ ಏನು ಮಾಡಬೇಕೆಂದು ಅವರಿಗೆ ಗೊತ್ತಿತ್ತು. ಅವರು ಮಕ್ಕಳಿಗೆ 'ನೀವು ಇರುವೆಗಳು ಚಲಿಸುತ್ತಿರುವುದನ್ನು ನೋಡಿದ್ದಿರಿ, ಅವು ಹೇಗೆ ಹೊಲದಲ್ಲಿ ಸಾಗುತ್ತಿವೆಯೋ ಹಾಗೆಯೇ ನೀವೆಲ್ಲರೂ ಹೋಗಬೇಕು ಎಂದರು. ಹೀಗಾಗಿ ಮಕ್ಕಳು ಪರಸ್ಪರ ಪಿಸುದನಿಯಲ್ಲಿ ಮಾತನಾಡಿ-ಕೊಳ್ಳುತ್ತಾ ಒಂದೇ ಸಾಲಿನಲ್ಲಿ ಮುಂದೆ ಸಾಗಿದರು. ಹೊಲದಲ್ಲಿ ಅವರು ಮರಗಳನ್ನು ಮುಟ್ಟಿದರು, ಹಕ್ಕಿಗಳನ್ನು ನೋಡಿದರು. ನೆಲದ ಮೇಲೆ ಬಿದ್ದ ಎಲೆಗಳನ್ನು ಸಂಗ್ರಹಿಸಿದರು, ಹಾಗೆಯೇ ಈ ಕೆಳಕಂಡ ಆಟಗಳನ್ನು ಆಡಿದರು:

1. ಹದಿನೈದನ್ನು ಎಣಿಸುತ್ತಿದ್ದಂತೆ ಏಳು ಮಕ್ಕಳ ಗುಂಪುಗಳ ಮೂಲಕ ಒಂದು ಚೌಕ/ತ್ರಿಕೋನ. ಅಷ್ಟಭುಜಾಕೃತಿ ಮಾಡುವುದು. ಹೊಲದಲ್ಲಿ ಶಿಕ್ಷಕರು ಹೇಳುವ ಕೆಲವು ಆಕಾರಗಳನ್ನು ಹುಡುಕಿ ಮತ್ತು ೩೦ ಎಣಿಸುವುದರ ಒಳಗೆ ವಾಪಸ್ಸು ಬರುವುದು.

2. ಇನ್ನೊಂದು ದಿನ ಮಕ್ಕಳು ಯಾವ ವಸ್ತುಗಳನ್ನು ಇಂಗ್ಲಿಷ್ ಪದಗಳಲ್ಲಿ ತಿಳಿಯಲು ಇಷ್ಟಪಡುತ್ತಾರೋ ಆ ವಸ್ತುಗಳನ್ನು ಕಲೆಹಾಕುವುದು. ಆ ವಸ್ತುಗಳಲ್ಲಿ ಕಲ್ಲುಗಳು, ದಳಗಳು, ಕೊಂಬೆಗಳು, ಬಸವನ ಹುಳುಗಳು, ಚಿಟ್ಟೆಗಳು ಅಥವಾ ಆಕಾಶದ ಬಣ್ಣಗಳಿರಬಹುದು. ಕೆಲವು ಮಕ್ಕಳಿಗೆ ಹೆಸರು ಗೊತ್ತಿರುತ್ತದೆ. ಬೇರೆ ಮಕ್ಕಳಿಗೆ ಆ ಹೆಸರುಗಳನ್ನು ಶಿಕ್ಷಕರು ಹೇಳಿಕೊಡುವುದು.

3. ಐದು ಪದಗಳನ್ನು ಆರಿಸಿ, ಶಬ್ದಗಳನ್ನು ಗುರುತಿಸಿ, ಮಕ್ಕಳಿಗೆ ಶಬ್ದಗಳನ್ನು ಕಲಿಯಲು ಮತ್ತು ಒಂದು ತಂಡವಾಗಿ ಎಲ್ಲ ಅಕ್ಷರಗಳನ್ನು ಜೋಡಿಸಲು ಹೇಳುವುದರ ಮೂಲಕ ಕಾಗುಣಿತ ಆಟ ಆಡುವುದು. ಅಲ್ಲಿ ನಾಲ್ಕು ಮಕ್ಕಳು ಒಂದು ಸಾಲಿನಲ್ಲಿ ನಿಲ್ಲುತ್ತಾರೆ. ಅವರು ಇಂಗ್ಲಿಷಿನ I ನಂತೆ ನಿಲ್ಲುತ್ತಾರೆ. ಇನ್ನೊಂದು ಗುಂಪು Cನಂತೆ ಸುರುಳಿ ಸುತ್ತಿ ನಿಲ್ಲುತ್ತಾರೆ. ಅಚ್ಚರಿ ತರುವ ಸೃಜಶೀಲ ವಿಧಾನಗಳನ್ನು ಮಕ್ಕಳು ಹೇಳುತ್ತಾರೆ. ಇಲ್ಲಿ ಸಾಮೂಹಿಕ ಉತ್ಸಾಹ ಮತ್ತು ತಂಡಗಳ ಅರ್ಥೈಸುವಿಕೆ ಆಧಾರದಲ್ಲಿ ಕಲಿಕೆ ನಡೆಯುವುದನ್ನು ಪ್ರಯತ್ನಿಸಲಾಗುತ್ತದೆ.

ಶಿಕ್ಷಕರು ತಾವು ಅನೇಕ ಸವಾಲುಗಳನ್ನು ಹೇಗೆ ಎದುರಿಸಿದೆವೆಂದು ಹಲವು ಸೃಜನಶೀಲ ಕತೆಗಳನ್ನು ಹೇಳುತ್ತಾರೆ. ಶಿಕ್ಷಕರಿಗೆ ಕಾರ್ಯಾಗಾರಗಳ ಕಲ್ಪನೆಯನ್ನು ಪುನರ್ ರೂಪಿಸಬೇಕು. ಶಿಕ್ಷಕರು ಪ್ರಯೋಗಗಳು ಮತ್ತು ಯಶಸ್ಸುಗಳತ್ತ ಗಮನ ಹರಿಸಬೇಕು. ಸಾಧನೆ ಮಾಡಲು ಪ್ರಯತ್ನಿಸುವ ಶಿಕ್ಷಕರು ಅಳವಡಿಸಿಕೊಳ್ಳುವ ನಿದರ್ಶನಗಳು ಮತ್ತು ಕಾರ್ಯತಂತ್ರಗಳು ವಾಸ್ತವಿಕ ನಿರೀಕ್ಷೆಗಳು ಮತ್ತು ಫಲಿತಾಂಶಗಳ ಆಧಾರದಲ್ಲಿರುತ್ತವೆ.

ತರಗತಿಗೆ ಸಂಬಂಧಿಸಿದಂತೆ ಮಕ್ಕಳು ಭಾವನಾತ್ಮಕ ಅಡೆ-ತಡೆಯನ್ನು ಹೊಂದಿರಬಹುದು. ಆಗ ತುಂಬು ಹೃದಯದಿಂದ, ಬೆಚ್ಚನೆಯ ಭಾವದಿಂದ ಮಗುವನ್ನು ಸ್ವೀಕರಿಸಬೇಕು. ಶಾಂತವಾಗಿರದ ಅಥವಾ ತೊಂದರೆಯಲ್ಲಿರುವ ಮಗುವನ್ನು ಹಳ್ಳಿಯ ಶಾಲೆಯಿಂದ ನಗರ ಶಾಲೆಗೆ ಕರೆತಂದಾಗ ಆ ಮಗುವಿಗೆ ಧೈರ್ಯತುಂಬಬಹುದು ಅಥವಾ ಭರವಸೆ ಹುಟ್ಟಿಸಬಹುದು. ಆ ಕಲೆಯನ್ನು ಶಿಕ್ಷಕರು ಕಲಿಯಬೇಕು.

**ಕೊನೆಯ ಅವಲೋಕನ**

ಕೊನೆಯದಾಗಿ, ಶಿಕ್ಷಕರಿಗೆ ಅಭಿನಂದಿಸುವಂತಹ, ತರಗತಿ ಕೊಠಡಿಯ ಅತ್ಯುತ್ತಮ ಅಭ್ಯಾಸಗಳನ್ನು ಸಂಕಲನ ರೂಪದಲ್ಲಿ ತಂದು ಹಂಚಿಕೊಳ್ಳಬೇಕೆನ್ನುವ ಪ್ರಸ್ತಾವನೆಯನ್ನು ನಾನು ಮುಂದಿಡ ಬಯಸುತ್ತೇನೆ. ಬಹುತೇಕ ಎಲ್ಲ ಶಿಕ್ಷಕರು ಅಲಕ್ಷ್ಯರಾಗಿರುವುದಿಲ್ಲ, ಅವರು ಯಾವಾಗಲೂ ಅಸಲಿಯಾದ, ಹೊಸದಾದ ಸೃಜನಶೀಲ ಮಾರ್ಗಗಳನ್ನು ಹುಡುಕುತ್ತಾರೆ. ಅರ್ಥ ಒದಗಿಸಲು, ಶಿಕ್ಷಣದ ಮಿತಿಯನ್ನು ವಿಸ್ತರಿಸಲು ಮತ್ತು ಅದಕ್ಕೆ ಪುನರ್ ವ್ಯಾಖ್ಯಾನ ನೀಡಲು ಮಕ್ಕಳ ಅಸ್ಮಿತೆಗಳನ್ನು ಗೌರವಿಸುತ್ತಾ ಮಕ್ಕಳು ಏನು ಮಾಡಬಲ್ಲರು ಮತ್ತು ಹೇಗೆ ಕಲಿಯಬಲ್ಲರೆಂಬುದರ ವಿವಿಧ ವಿಧಾನಗಳ ಆಯಾಮಗಳನ್ನು ಶೋಧಿಸಲು ಸದಾ ಸಿದ್ಧರಾಗಿರುತ್ತಾರೆ. ಬಾಲ್ಯದ ಹುರುಪು ಹಾಗು ಚೈತನ್ಯದ ಮೂಲಕ ಮಕ್ಕಳ ಮಾರ್ಗದರ್ಶನ ನೀಡುತ್ತಿರುವ ಈ ಸೃಜನಶೀಲ ಹರಿಕಾರರಿಗೆ ನನ್ನ ವಂದನೆಗಳು!

**ಆಕರಗಳು ಮತ್ತು ಹೆಚ್ಚಿನ ಓದಿಗಾಗಿ**

Wernar, S. A (1986). *The Teacher*, Australia: Simon and Schuster

Holt, John. (1967)/. *How Children Learn US*: Pitman Publishing (Perseus Publishing (1995)

*https://www.washingtonpost.com/education/2019/08/30/what-finland-is-really-doing-improve-its-acclaimed-schools/ Accessed on 29.04. 2020*



**ಆಶಾ ಸಿಂಗ್** ಅವರು ಲೇಡಿ ಇರ್ವಿನ್ ಕಾಲೇಜಿನಲ್ಲಿ ೩೪ ವರ್ಷಗಳ ಕಾಲ ಮಕ್ಕಳ ಬೆಳವಣಿಗೆ, ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ನಂತರ ಅವರು ತಮಗೆ ಬಹಳ ಇಷ್ಟವಾದ, ಆಳವಾದ ಆಸಕ್ತಿಯಿರುವ 'ಮಾನವ ಜೀವನ ಚಕ್ರದ ಆರಂಭಿಕ ವರ್ಷಗಳು' ವಿಷಯದಲ್ಲಿ ಗಮನ ಹರಿಸಿದರು. ಅವರು ಅಂಬೇಡ್ಕರ್ ವಿಶ್ವವಿದ್ಯಾಲಯದ ಯುವ ಮನಸ್ಸುಗಳೊಂದಿಗೆ ಮತ್ತು ಶಾಲೆಗಳಲ್ಲಿ ಸೇವಾನಿರತ ಶಿಕ್ಷಕರಲ್ಲಿ ತಮ್ಮ ಕಲೆ ಆಧಾರಿತ ಕಲಿಕೆಯ ಮೌಲ್ಯವನ್ನು ಹಂಚಿಕೊಳ್ಳುತ್ತಿದ್ದಾರೆ. ಅವರು ಡಿಜಿಟಲ್ ವಯಸ್ಕ-ಮಕ್ಕಳ ಸಂವಾದದ ಪುನರುಜ್ಜೀವಕ್ಕಾಗಿ ವ್ಯಾಪಕವಾಗಿ ಮಕ್ಕಳೊಂದಿಗೆ ಕಥೆಯನ್ನು ಹಂಚಿಕೊಂಡಿದ್ದಾರೆ. ಅವರನ್ನು asha.singh903@gmail.com ನಲ್ಲಿ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ ಬಿ ಎನ್** । ಪರಿಶೀಲನೆ: **ಲತಾ ಕೆ ಸಿ**